# ಭರತಕಲ್ಪ

ಸುಖದ ಪರಿಕಲ್ಪನೆಯನ್ನು ವ್ಯಾಖ್ಯಾನಿಸುವ ಪಿ. ಲಂಕೇಶರ ‘ನೀಲು ಕವಿತೆ’ ಹೀಗಿದೆ: ‘ಸುಖಕ್ಕಾಗಿ ಕಾತರಿಸುವ ಕೋಟ್ಯಂತರ ಜನಕ್ಕೆ/ ಹಣ ಬೇಕು, ನೆಲ ಬೇಕು/ ಎಲ್ಲೋ ಕೆಲವರಿಗೆ ಪ್ರೀತಿ/ ಮತ್ತೆ ಕೆಲವರಿಗೆ – ತನ್ನ ಕುಗ್ರಾಮದ ಹಿತ್ತಲೊಂದರ ಹೂವು/ ಬಡ ಜೋಗಿಯ ಹಾಡು!’

ಸುಖದ ಎರಡು ಮಾದರಿಗಳನ್ನು ನೀಲು ಕವಿತೆ ನಮ್ಮ ಮುಂದಿಡುತ್ತಿದೆ. ಮೊದಲನೆಯದು, ಸುಖದ ಕುರಿತು ಈ ಜಗತ್ತು ಕಟ್ಟಿಕೊಂಡಿರುವ ಜನಪ್ರಿಯ ಪರಿಕಲ್ಪನೆಗಳ ಕುರಿತಾದುದು, ಹೆಣ್ಣು ಹೊನ್ನು ಮಣ್ಣು ರೀತಿಯದು. ಇದಕ್ಕೆ ಭಿನ್ನವಾದ ಮತ್ತೊಂದು ಮಾದರಿ, ಒಳಗಲ ಲೋಕಕ್ಕೆ ಸಂಬಂಧಿಸಿದ್ದು – ಪ್ರೀತಿ ಹಾಗೂ ಪ್ರಕೃತಿಯ ಕುರಿತಾದುದು. ಈ ಎರಡು ಮಾದರಿಗಳಲ್ಲಿ ಸಮಾಜ ಹೆಚ್ಚು ಮಹತ್ವ ಕೊಡುವುದು ಮೊದಲನೇ ಮಾದರಿಗೆ. ದೇಶವೊಂದರ ಅಭಿವೃದ್ಧಿಯ ಮಾನದಂಡಗಳನ್ನು ಗಮನಿಸಿ: ಅತ್ಯುತ್ತಮ ಗುಣಮಟ್ಟದ ರಸ್ತೆಗಳು, ಗಗನಚುಂಬಿ ಕಟ್ಟಡಗಳು, ಕೊಳ್ಳುಬಾಕರಿಂದ ತುಂಬಿರುವ ಮಳಿಗೆಗಳು, ಉಜ್ವಲ ತಂತ್ರಜ್ಞಾನ, ಗಣನೀಯ ತಲಾದಾಯ, ಜಾಗತಿಕ ಮನ್ನಣೆ – ಇವೆಲ್ಲವನ್ನೂ ಪ್ರಗತಿಯ ರೂಪದಲ್ಲಿ ನೋಡುತ್ತೇವೆ. ಆಧುನಿಕತೆಯ ಸವಲತ್ತುಗಳಿಗೆ ಒಗ್ಗಿಹೋದ ಮನಸ್ಸುಗಳು ರೂಪಿಸಿದ ಸಂತೋಷದ ಸೂಚ್ಯಂಕಗಳಲ್ಲಿ ಹಿತ್ತಲ ಹೂವಿಗೆ, ಅದರ ನರುಗಂಪಿಗೆ, ಹಕ್ಕಿಹಾಡಿಗೆ ಹೆಚ್ಚಿನ ಮಹತ್ವವೇನಿಲ್ಲ. ನಾವು ರೂಪಿಸಿಕೊಂಡ ಆಡಳಿತ ವ್ಯವಸ್ಥೆತ ಅಭಿವೃದ್ಧಿಯ ಸ್ವರೂಪದಲ್ಲೂ ಪ್ರೀತಿ–ಪ್ರಕೃತಿ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಆದರೆ, ಸುಖದ ರೂಪದಲ್ಲಿ ನಾವು ನಂಬಿರುವ ಸವಲತ್ತುಗಳು ಮನುಷ್ಯನನ್ನು ಅಂತಿಮವಾಗಿ ದುಃಖಕ್ಕೀಡುಮಾಡುತ್ತಿವೆ. ಈ ವೈರುಧ್ಯ ಇಂದಿನದಷ್ಟೇ ಅಲ್ಲ, ರಾಮಾಯಣ ಕಾಲದಲ್ಲೂ ಇತ್ತು. ಅಭಿವೃದ್ಧಿಯ ಜನಪ್ರಿಯ ಪರಿಕಲ್ಪನೆಯಲ್ಲಿ ಪುರಾಣ ಇತಿಹಾಸ ವರ್ತಮಾನಗಳಲ್ಲಿ ಹೆಚ್ಚಿನ ಬದಲಾವಣೆಯೇನೂ ಇಲ್ಲ ಎನ್ನುವುದನ್ನು ಆರ್. ಸುನಂದಮ್ಮನವರ ‘ಭರತಕಲ್ಪ’ ಕಾದಂಬರಿ ಬಹು ಸೊಗಸಾಗಿ ಚಿತ್ರಿಸುತ್ತದೆ.

ರಾಮ, ರಾಮಾಯಣದ ಕಥಾನಾಯಕ ಮಾತ್ರವಲ್ಲ, ಆದರ್ಶ ಆಡಳಿತದ ಉದಾಹರಣೆಗೆ ವರ್ತಮಾನದಲ್ಲೂ ಒದಗಿಬರುವ ರೂಪಕ. ರಾಮನ ವರ್ಚಸ್ಸಿನಲ್ಲಿ ಹೊಳಪು ಕಳೆದುಕೊಂಡ ಭರತನ ವ್ಯಕ್ತಿತ್ವವನ್ನು ‘ಭರತಕಲ್ಪ’ ಶೋಧಿಸುತ್ತದೆ. ರಾಮನ ಗೈರುಹಾಜರಿಯಲ್ಲಿ ಭರತ ನಡೆಸುವ ಆಡಳಿತ ಅಂತಃಕರಣದಿಂದ ಕೂಡಿದ್ದುದನ್ನು ಹಾಗೂ ಸಮಾಜದ ಕಲ್ಯಾಣವನ್ನು ಜನಪ್ರಿಯ ಚೌಕಟ್ಟುಗಳಾಚೆಗೆ ಸಾಧಿಸಲು ಪ್ರಯತ್ನಿಸಿದ್ದನ್ನು ಕಾದಂಬರಿ ಕಟ್ಟಿಕೊಡುತ್ತದೆ.

ಸುನಂದಮ್ಮನವರ ಭರತನಿಗೆ ಎರಡು ಬಗೆಯ ಸವಾಲಿದೆ. ಒಂದು, ರಾಮನ ವರ್ಚಸ್ಸಿನಡಿ ಆಡಳಿತವನ್ನು ನಡೆಸುವ ಒತ್ತಡ. ಎರಡನೆಯದು, ಆಡಳಿತದ ಸಿದ್ಧ ಚೌಕಟ್ಟುಗಳನ್ನು ಮೀರಿ ತನ್ನ ನಂಬಿಕೆಗಳನ್ನು ಜಾರಿಗೆ ತರುವ ಸವಾಲು. ರಾಮಸ್ಮರಣೆಯಲ್ಲಿ ಮುಳುಗಿದ ರಾಜ್ಯದಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಪಡಿಸುವುದು ಹಾಗೂ ರಾಮ ಮರಳುವ ಹದಿನಾಲ್ಕು ವರ್ಷಗಳವರೆಗಷ್ಟೇ ತನ್ನ ಆಡಳಿತ ಎನ್ನುವ ಸತ್ಯಕ್ಕೆ ಬದ್ಧನಾಗಿ ಆಡಳಿತ ನಡೆಸುವುದು ಸುಲಭವೇನಾಗಿರಲಿಲ್ಲ. ಈ ಸವಾಲುಗಳನ್ನು ಎದುರಿಸುವಲ್ಲಿ ಭರತ ಆರಿಸಿಕೊಂಡ ಮಮತೆಯ ಮಾತೃ ಮಾರ್ಗ ಅಸಾಧಾರಣವಾದುದು.

ರಾಜ್ಯವನ್ನು ಕಟ್ಟುವ ನಿಟ್ಟಿನಲ್ಲಿ ಕೃಷಿ ಸಂಸ್ಕೃತಿ ಹಾಗೂ ಮಾತೃ ಸಂಸ್ಕೃತಿ ಭರತ ನೆಚ್ಚಿದ ಮೌಲ್ಯಗಳು. ಕೃಷಿ ಸಂಸ್ಕೃತಿಯ ಮಾದರಿಯನ್ನು ಜನಕ ಮಹಾರಾಜನ ಆಡಳಿತದಿಂದ ಹಾಗೂ ಮಾತೃ ಸಂಸ್ಕೃತಿಯ ಮಾದರಿಯನ್ನು ತಾಯಿಯ ತವರಿನಿಂದ ಭರತ ಪಡೆದುಕೊಂಡಿದ್ದಾನೆ. ನಾಣ್ಯವೊಂದರ ಎರಡು ಮುಖದಂತಿರುವ ಈ ಸಂಸ್ಕೃತಿಗಳು ಆಳದಲ್ಲಿ ಒಂದರೊಳಗೊಂದು ಬೆರೆತುಹೋಗಿವೆ. ಕೃಷಿ ಅವಲಂಬಿಸಿರುವುದು ಮಣ್ಣನ್ನು, ಭೂಮಿಯನ್ನು. ಈ ಭೂಮಿ ಹೆಣ್ಣೂ ಹೌದು, ತಾಯಿಯೂ ಹೌದು. ಹಾಗಾಗಿ, ಕೃಷಿಯ ಕುರಿತ ಮಾತು–ನಂಬಿಕೆ ಹೆಣ್ಣಿನ ಕುರಿತಾದುದೂ ಆಗಿವೆ. ಕುಟುಂಬದಲ್ಲಿ, ಸಮಾಜದಲ್ಲಿ, ಆಡಳಿತದಲ್ಲಿ ಹೆಣ್ಣಿನ ಸಹಭಾಗಿತ್ವ ಹಾಗೂ ನಾಯಕತ್ವವನ್ನು ಮಾತೃ ಸಂಸ್ಕೃತಿ ಪ್ರತಿನಿಧಿಸುತ್ತದೆ. ಜನಪರ ಆಡಳಿತಕ್ಕೆ, ಸಮಾಜದ ಆರೋಗ್ಯ ಮತ್ತು ಅಭಿವೃದ್ಧಿಗೆ ಕೃಷಿ ಅಗತ್ಯವಿರುವಂತೆಯೇ, ಹೆಣ್ಣಿನ ನೋಟವೂ ಅಗತ್ಯ ಎನ್ನುವುದು ಭರತನ ಪ್ರತಿಪಾದನೆ. ಯುದ್ಧಗಳ ಮೂಲಕ ರಾಜ್ಯವನ್ನು ವಿಸ್ತರಣೆ ಮಾಡುವುದರಲ್ಲಿ ಅವನಿಗೆ ನಂಬಿಕೆಯಿಲ್ಲ. ಕಾಡನ್ನು ಕಡಿದು ಕೃಷಿ ಪ್ರದೇಶವನ್ನು ವಿಸ್ತರಿಸುವ ಮೂಲಕ ರಾಜ್ಯ ವಿಸ್ತರಣೆ ಮಾಡುವುದರಲ್ಲಿ ಅವನಿಗೆ ನಂಬಿಕೆ.

ಮಹಿಳೆಯರ ಕುರಿತಂತೆ ಭರತನ ದೃಷ್ಟಿಕೋನ ಆಧುನಿಕವಾದುದು. ರಾಮನನ್ನು ಅನುಸರಿಸಿ ಲಕ್ಷ್ಮಣನೂ ಕಾಡಿಗೆ ಹೋದ ನಂತರ ಒಂಟಿಯಾಗುವ ಊರ್ಮಿಳೆ, ಅರಮನೆ ಬಿಟ್ಟು ತೋಟದ ಮನೆಗೆ ಬರುತ್ತಾಳೆ; ಕೃಷಿ ಮಾಡುತ್ತಾಳೆ. ಅವಳನ್ನು ಆಧರಿಸಿ ಭರತನೂ ಅರಮನೆ ತೊರೆದು ನಂದಿಗ್ರಾಮದ ಕೃಷಿ ಪರಿಸರದಲ್ಲಿ ಬದುಕುತ್ತಾನೆ; ಪರ್ಯಾಯ ಆಡಳಿತ ಕೇಂದ್ರವನ್ನು ಸೃಷ್ಟಿಸುತ್ತಾನೆ. ಶ್ರುತಕೀರ್ತಿಯ ಕಸೂತಿ ಕಲೆಯನ್ನು ಪ್ರೋತ್ಸಾಹಿಸಿ, ಆ ಕಲೆಯನ್ನು ಆಸಕ್ತ ಹೆಣ್ಣುಮಕ್ಕಳಿಗೆ ಕಲಿಸಿಕೊಡುವ ಅವಕಾಶ ಕಲ್ಪಿಸುತ್ತಾನೆ. ಸೈನಿಕರಿಗೆ, ಸೇವಕರಿಗೆ ಕೃಷಿ ಭೂಮಿಯನ್ನು ಒದಗಿಸಿಕೊಡುವ ಪ್ರಯತ್ನ ನಡೆಸುತ್ತಾನೆ. ಭರತನ ಈ ನಡೆಗಳೆಲ್ಲವೂ ಅಯೋಧ್ಯೆಯ ಆಡಳಿತಕ್ಕೆ ತೀರಾ ಹೊಸತಾದವು.

ಯುದ್ಧ ಮತ್ತು ಯಜ್ಞ ಯಾಗಾದಿಗಳ ತಳಹದಿಯಲ್ಲಿ ಅಸ್ತಿತ್ವ ಕಂಡುಕೊಂಡಿದ್ದ ರಾಜ್ಯವನ್ನು ಕೃಷಿ ಸಂಸ್ಕೃತಿಯ ನಾಡನ್ನಾಗಿ ರೂಪಿಸುವಲ್ಲಿ ಭರತ ಯಶಸ್ವಿಯಾಗುತ್ತಾನೆ. ಮಹಿಳೆಯರ ಅಭಿಪ್ರಾಯ, ಪ್ರತಿಭೆಯ ಅಭಿವ್ಯಕ್ತಿಯ ಕುರಿತು ಭರತನದು ತೆರೆದ ಮನಸು. ಸುಖದ ಪರಿಕಲ್ಪನೆಗಳ ರೂಪದಲ್ಲಿ ಲಂಕೇಶರು ಹೇಳುವ ಪ್ರೀತಿ, ಕುಗ್ರಾಮದ ಹಿತ್ತಲೊಂದರ ಹೂವು ಮತ್ತು ಬಡ ಜೋಗಿಯ ಹಾಡುಗಳನ್ನು ಭರತನ ಬದುಕು ಮತ್ತು ಆಡಳಿತ ನೆನಪಿಸುತ್ತದೆ. ‘ಎಲ್ಲರೂ ನಿರ್ಭೀತಿಯಿಂದ ಬದುಕುವಂತಾಗಬೇಕು. ಯಾರನ್ನು ಯಾರೂ ಹಿಂಸಿಸಬಾರದು’ ಎನ್ನುವ ಭರತನ ನಂಬಿಕೆ ಎಲ್ಲ ಕಾಲಕ್ಕೂ ಅಗತ್ಯವಾದ ಮಾನವೀಯತೆಯ ವ್ಯಾಖ್ಯಾನದಂತಿದೆ. ವರ್ತಮಾನದ ಕ್ಷೋಭೆಗಳ ಹಿನ್ನೆಲೆಯನ್ನು ಪರಿಶೀಲಿಸಿದರೆ, ಬಹುತೇಕ ಸಮಸ್ಯೆಗಳ ಹಿಂದಿರುವುದು ಹೆಣ್ಣಿನ ಹಾಗೂ ಕೃಷಿ ಸಂಸ್ಕೃತಿಯ ನಿರ್ಲಕ್ಷ್ಯ ಎನ್ನುವುದು ಸ್ಪಷ್ಟವಾಗುತ್ತದೆ. ಭರತನಿಗೆ ಆತುಕೊಳ್ಳುವುದರಲ್ಲಿ ಸಾಮಾಜಿಕ ಸ್ವಾಸ್ಥ್ಯದ ಸಾಧ್ಯತೆಯೂ ಇದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಅಪ್ರಿಯವಾದರು ಸತ್ಯವನ್ನು ಹೇಳಬೇಕಾದುದು ಹಿತೈಷಿಯ ಧರ್ಮ.

  – ಅನಕೃ

- ಮದುವೆ ಎಂಬ ಮೋಹದ ಬೋನಿನಲ್ಲಿ ಸಮಾಜ ಎಲ್ಲರನ್ನೂ ಸಿಕ್ಕಿಸಿ ಪಳಗಿಸುತ್ತಿದೆ.

  –ನಾ. ಕಸ್ತೂರಿ

- ಪಾಪವಿದೆ ಪುಣ್ಯವಿದೆ, ನರಕವಿದೆ ನಾಕವಿದೆ, ಸ್ವೀಕರಿಸು ಓ ಗುರುವೇ ಅಂತರಾತ್ಮ.

  –ಕುವೆಂಪು

- ನುಡಿ ನಡೆವ ಕಾಲದಲ್ಲಿ ದಾನಧರ್ಮ ಮಾಡದೆ, ಅಡವಿಯೊಳಗೆ ಕೆರೆ ತುಂಬಿ ಬತ್ತಿದಂತೆ.

  –ಕನಕದಾಸ

- ಮಹಾಕಾರ್ಯಗಳನ್ನು ಮಹಾತ್ಯಾಗದಿಂದ ಮಾತ್ರ ಸಾಧಿಸಲು ಸಾಧ್ಯ. ಅನ್ಯಾಯದ ಸ್ಥಾನವು ಅಭದ್ರವಾದುದು. ಅದರಿಂದ ಏಳಿಗೆ ಆಗದು.

  –ಸ್ವಾಮಿ ವಿವೇಕಾನಂದ

- ಕ್ಷಮೆಯೇ ಯಶಸ್ಸು, ಧರ್ಮ. ಕ್ಷಮೆಯಲ್ಲಿಯೇ ಚರಾಚರ ಜಗತ್ತು ಅಡಗಿದೆ.

  –ವಾಲ್ಮೀಕಿ ರಾಮಾಯಣ

- ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು ನಿಂತಲ್ಲೇ ನಿಂತಿರಬೇಕಾಗುತ್ತದೆ.

  –ಕೆ. ಶಿವರಾಮ ಕಾರಂತ

- ನಾಶಪಡಿಸಬಹುದು. ಆದರೆ, ಯಾವತ್ತಿಗೂ ನನ್ನ ಆತ್ಮಬಲವನ್ನು ಬಂಧಿಸಿಡಲಾಗದು.

  –ಮಹಾತ್ಮ ಗಾಂಧಿ